ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 519 |
| ಸದಸ್ಯರ ಹೆಸರು | ಶ್ರೀ ಯು.ಬಿ. ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 20.02.2023 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |
| ಪ್ರಶ್ನೆ | ಉತ್ತರ |
| (ಅ) ರಾಜ್ಯದಾದ್ಯಂತ 2007 ರಿಂದ ಕಿಯೋನಿಕ್ಸ್ ಫ್ರಾಂಚೈಸಿಗಳ ವಿರುದ್ಧ ಹಾಗೂ ಮಾನವ ಸಂಪನ್ಮೂಲ ಏಜೆನ್ಸಿಗಳ ವಿರುದ್ಧ ಬಂದಿರುವ ದೂರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು/ಫ್ರಾಂಚೈಸಿವಾರು ವಿವರಗಳನ್ನು ಒದಗಿಸುವುದು) | ರಾಜ್ಯದಾದ್ಯಂತ 2007 ರಿಂದ ಕಿಯೋನಿಕ್ಸ್ ಫ್ರಾಂಚೈಸಿಗಳ ವಿರುದ್ಧ ಬಂದಿರುವ ದೂರುಗಳ **ಸಂಖ್ಯೆ-2** ಹಾಗೂ ಮಾನವ ಸಂಪನ್ಮೂಲ ಏಜೆನ್ಸಿಗಳ ವಿರುದ್ಧ ಬಂದಿರುವ ದೂರುಗಳ **ಸಂಖ್ಯೆ**-1.<br>**ವಿವರ ಈ ಕೆಳಕಂಡಂತಿರುತ್ತದೆ:**<br>1. **ಫ್ರಾಂಚೈಸಿ ಕೇಂದ್ರಗಳು:**<br>i) ಮೆ: ಮೂನ್‌ಲೈಟ್ ಇನ್ಸ್‌ಟಿಟ್ಯೂಟ್ ಆಫ್ ಇನ್‌ಫಾರ್ ಮೇಷನ್ ಟೆಕ್ನಾಲಜಿ, (MIIT) ಅಂಬೇಡ್ಕರ್ ಭವನದ ಎದುರು, ಕೋರ್ಟ್ ರಸ್ತೆ, ರಾಮನಗರ – 562 159.<br>ii) ಮೆ: ಶಾರ್ಪ್ ಕಂಪ್ಯೂಟರ್ಸ್, ಯಶ್ ಪ್ಲಾಜಾ, 2ನೇ ಮಹಡಿ, ಸಿವಿಲ್ ಆಸ್ಪತ್ರೆ ಎದುರು, ಕೊಲ್ಲಾಪುರ ಸರ್ಕಲ್ ಹತ್ತಿರ, ಬೆಳಗಾವಿ.<br>2. **ಮಾನವ ಸಂಪನ್ಮೂಲ ಏಜೆನ್ಸಿಗಳು:**<br>ಮೆ: ಎಸ್.ಎಸ್. ಜಿ.ಆರ್. ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್, ನಂ.1613, 2ನೇ ಮಹಡಿ, 1ನೇ 'ಎ' ಕ್ರಾಸ್, ವಾಟರ್ ಟ್ಯಾಂಕ್ ರೋಡ್, 2ನೇ ಹಂತ, ಚಂದ್ರಾ ಲೇಔಟ್, ಬೆಂಗಳೂರು-560 040. |
| (ಆ) ದೂರುಗಳ ಸಂಬಂಧ ಕಿಯೋನಿಕ್ಸ್ ಸಂಸ್ಥೆಯು ಕೈಗೊಂಡಿರುವ ಕ್ರಮಗಳೇನು; | ದೂರುಗಳ ಸಂಬಂದ ಕಿಯೋನಿಕ್ಸ್ ಸಂಸ್ಥೆಯಿಂದ 2 ಸಂಸ್ಥೆಗಳ ಮಾನ್ಯತೆಯನ್ನು ರದ್ದುಗೊಳಿಸಲಾಗಿದೆ ಹಾಗೂ ಈ ಸಂಸ್ಥೆಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಹೂಡಲಾಗಿದೆ. |
| (ಇ) ಬೆಳಗಾವಿ ಜಿಲ್ಲೆಯಲ್ಲಿರುವ ಕಿಯೋನಿಕ್ಸ್ ಫ್ರಾಂಚೈಸಿಗಳ ಮತ್ತು ಮಾನವ ಸಂಪನ್ಮೂಲ ಏಜೆನ್ಸಿಗಳ ಸಂಖ್ಯೆ ಎಷ್ಟು; ಇವರುಗಳ ವಿರುದ್ಧ ದಾಖಲಾಗಿರುವ ದೂರುಗಳ ಸಂಖ್ಯೆ ಎಷ್ಟು; | ಬೆಳಗಾವಿ ಜಿಲ್ಲೆಯಲ್ಲಿರುವ ಫ್ರಾಂಚೈಸಿಗಳ ಸಂಖ್ಯೆ:09 ಹಾಗೂ ಮಾನವ ಸಂಪನ್ಮೂಲ ಏಜೆನ್ಸಿಗಳ ಸಂಖ್ಯೆ:03 (ಹಾಲಿ ಈ ಸಂಸ್ಥೆಗಳು ಚಾಲ್ತಿಯಲ್ಲಿರುವುದಿಲ್ಲ).<br>ಬೆಳಗಾವಿ ಜಿಲ್ಲೆಯ 9 ಫ್ರಾಂಚೈಸಿ ಕೇಂದ್ರಗಳಲ್ಲಿ 1 ಕೇಂದ್ರದ ವಿರುದ್ಧ ಅಂದರೆ ಮೆ: ಶಾರ್ಪ್ ಕಂಪ್ಯೂಟರ್ಸ್, ಬೆಳಗಾವಿ ಇವರ ವಿರುದ್ಧ ಹಣಕಾಸು ಅಧಿಕಾರಿ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಇವರು ಪತ್ರ ಬರೆದಿರುತ್ತಾರೆ. |
| (ಈ) ಈ ಸಂಬಂಧ ದೂರುಗಳಿಗೆ ಅನುಗುಣವಾಗಿ ಕಿಯೋನಿಕ್ಸ್ ಸಂಸ್ಥೆಯೂ ಕೈಗೊಂಡಿರುವ ಕ್ರಮಗಳೇನು? (ಫ್ರಾಂಚೈಸಿವಾರು ಸಂಪೂರ್ಣ ವಿವರವನ್ನು ಒದಗಿಸುವುದು) | 1. ಮೆ: ಮೂನ್‌ಲೈಟ್ ಇನ್ಸ್‌ಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ, (MIIT) ರಾಮನಗರ, ಇವರು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ವಿಫಲರಾಗಿರುತ್ತಾರೆ ಹಾಗೂ ಹಣಕಾಸಿನ ವ್ಯವಹಾರದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದ್ದರಿಂದ ಈ ಕೇಂದ್ರಕ್ಕೆ ಕಿಯೋನಿಕ್ಸ್ ಸಂಸ್ಥೆಯಿಂದ ನೀಡಿರುವ ಫ್ರಾಂಚೈಸಿ ಮಾನ್ಯತೆಯನ್ನು ಹಾಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷಾ ಕೇಂದ್ರದ ಮಾನ್ಯತೆಯನ್ನು ದಿನಾಂಕ:15-12-2022ರಂದು ರದ್ದುಗೊಳಿಸಲಾಗಿದೆ ಹಾಗೂ ಐಜೂರು ಪೊಲೀಸ್ ಠಾಣೆ, |

| | |
|---|---|
| | ರಾಮನಗರ, ಇಲ್ಲಿ ಮೊಕದ್ದಮೆಯನ್ನು ದಿನಾಂಕ:15.12.2022 ರಂದು ದಾಖಲಾಗಿಸಲಾಗಿರುತ್ತದೆ. ತನಿಖೆ ಪ್ರಗತಿಯಲ್ಲಿರುತ್ತದೆ.<br>2. ಮೆ: ಶಾರ್ಪ್ ಕಂಪ್ಯೂಟರ್ಸ್, ಬೆಳಗಾವಿ, ಇವರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ SCSP ಯ 94 ಮತ್ತು TSP ಯ 32 ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಶುಲ್ಕ ಬಿಡುಗಡೆ ಮಾಡಲು ನೀಡಿರುವ ಖಾತೆ, ಬ್ಯಾಂಕ್ ಹೆಸರು ಮತ್ತು ಕಿಯೋನಿಕ್ಸ್ ಲೆಟರ್‌ಹೆಡ್‌ಗಳ ವಿಳಾಸ ಎಲ್ಲವೂ ಕರಾರು ನಿಯಮಕ್ಕೆ ವಿರುದ್ಧವಾಗಿರುತ್ತದೆ. ತರಬೇತಿ ಸಂಸ್ಥೆಗಳಿಗೆ ನೀಡಿರುವ ನಿಯಮವನ್ನು ಪಾಲಿಸಿರುವುದಿಲ್ಲ ಮತ್ತು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ವಿಫಲರಾಗಿರುತ್ತಾರೆ ಮತ್ತು ಹಣಕಾಸಿನ ಅವ್ಯವಹಾರದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕಿಯೋನಿಕ್ಸ್ ಫ್ರಾಂಚೈಸಿ ಮಾನ್ಯತೆಯನ್ನು ದಿನಾಂಕ:17.01.2023 ರಂದು ರದ್ದುಗೊಳಿಸಿದೆ ಹಾಗೂ CEN Crime Police Station, ಬೆಳಗಾವಿ ನಗರ ಇಲ್ಲಿ ದಿನಾಂಕ:16.01.2023 ರಂದು ಮೊಕದ್ದಮೆ ದಾಖಲಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ.<br>3. ಮೆ: ಎಸ್.ಎಸ್.ಜಿ.ಆರ್. ಟೆಕ್ನಾಲಜಿಸ್ ಪ್ರೈ.ಲಿ. ಬೆಂಗಳೂರು, ಇವರು ಡಾ. ಬಿ.ಆರ್. ಅಂಬೇಡ್ಕರ್ ನಿಗಮ ನಿಯಮಿತ ಬೆಂಗಳೂರು ಇವರಿಗೆ ಹೊರಗುತ್ತಿಗೆ ಮೇಲೆ ನೌಕರರನ್ನು ನೀಡಿರುತ್ತಾರೆ. ಕೆಲವು ಹೊರಗುತ್ತಿಗೆ ನೀಡಿರುವ ನೌಕರರಿಗೆ ಕಾಲಕಾಲಕ್ಕೆ ವೇತನ ಮತ್ತು ಶಾಸನಬದ್ಧ ವಂತಿಕೆಗಳನ್ನು ಸರಿಯಾಗಿ ಪಾವತಿಸುತ್ತಿರುವುದಿಲ್ಲವೆಂದು ದಿನಾಂಕ: 17.05.2021ರ ಪತ್ರದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಎಸ್.ಎಸ್.ಜಿ.ಆರ್. ಟೆಕ್ನಾಲಜಿಸ್ ಪ್ರೈ.ಲಿ. ಬೆಂಗಳೂರು ಸಂಸ್ಥೆಯವರು ಕಿಯೋನಿಕ್ಸ್ ಸಂಸ್ಥೆಗೆ ನೀಡಿದ್ದ Security Deposit ಅನ್ನು ಮುಟ್ಟುಗೋಲು ಹಾಕಿಕೊಂಡು ವೇತನವನ್ನು ಪಾವತಿಸಲಾಗಿದೆ. |

(ಐಟಿಬಿಟಿ 15 ಎಲ್‌ಸಿಎಂ 2023)

(ಡಾ॥ ಅಶ್ವಥ್ ನಾರಾಯಣ ಸಿ. ಎನ್)
ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.